| | |
|---|---|
| Test Paper : **II**<br>Test Subject : **KANNADA**<br>Test Subject Code : **K-0213** | Test Booklet Serial No. : ______________<br>OMR Sheet No. : ______________<br>Roll No. ☐☐☐☐☐☐☐☐<br>(Figures as per admission card) |

**Name & Signature of Invigilator/s**

Signature: ______________ Signature: ______________

Name : ______________ Name : ______________

**Paper : II**

**Subject : KANNADA**

Time : 1 Hour 15 Minutes | Maximum Marks : 100

Number of Pages in this Booklet : **8** | Number of Questions in this Booklet : **50**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಐವತ್ತು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಪ್ರಶ್ನೆಪುಸ್ತಿಕೆ ಸ್ವೀಕರಿಸಬೇಡಿ. ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ:** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆ ಪತ್ರಿಕೆ I ರಲ್ಲಿ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ, **ಪ್ರಶ್ನೆ ಪತ್ರಿಕೆ I ಮತ್ತು ಪ್ರಶ್ನೆ ಪತ್ರಿಕೆ II ರಲ್ಲಿ ಇರುವ ಪ್ರಶ್ನೆಗಳಿಗೆ ನಿಮ್ಮ ಉತ್ತರಗಳನ್ನು ಸೂಚಿಸತಕ್ಕದ್ದು.** OMR ಉತ್ತರ ಹಾಳೆಯಲ್ಲಿ ಅಂಡಾಕೃತಿಯಲ್ಲದೆ ಬೇರೆ ಯಾವುದೇ ಸ್ಥಳದಲ್ಲಿ ಉತ್ತರವನ್ನು ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯ ಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**

**Instructions for the Candidates**

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the oval as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the questions are to be indicated in the **OMR Sheet kept inside the Paper I Booklet only**. If you mark at any place other than in the ovals in the Answer Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet soon after the examination.
11. **Use only Blue/Black Ball point pen.**
12. **Use of any calculator or log table etc., is prohibited.**
13. **There is no negative marks for incorrect answers.**

# KANNADA

## Paper – II

**ಗಮನಿಸಿ :** ಈ ಪತ್ರಿಕೆಯು **(50) ಐವತ್ತು** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳನ್ನೂ **ಕಡ್ಡಾಯವಾಗಿ** ಉತ್ತರಿಸಬೇಕು.

**ಏಕ ಆಯ್ಕೆಯ ಮಾದರಿಯ ಪ್ರಶ್ನೆಗಳು :**

1. ಹಲ್ಮಿಡಿ ಶಾಸನವನ್ನು ಶೋಧಿಸಿದವರು
   (A) ಡಾ. ಎಂ. ಎಚ್. ಕೃಷ್ಣ
   (B) ಪ್ರೊ. ಎಂ. ಎಚ್. ಕೃಷ್ಣಯ್ಯ
   (C) ಬಿ. ಎಲ್. ರೈಸ್
   (D) ಜೆ. ಎಫ್.ಫ್ಲೀಟ್

2. ''ಗುಣಮಿದು ದೋಷಮಿದೆಂದರಿಪುಗುಮಾ ಪರಮ ಕವಿ ಪ್ರಧಾನರಾ ಕಾವ್ಯಂಗಳ್'' ಈ ಉಕ್ತಿಯು ಬಂದಿರುವ ಕೃತಿ
   (A) ಕಾವ್ಯಾವಲೋಕನ (B) ಶಬ್ದ ಮಣಿದರ್ಪಣ
   (C) ಕಬ್ಬಿಗರ ಕಾವ (D) ಕವಿರಾಜ ಮಾರ್ಗ

3. ಕನ್ನಡದ ಮೊಟ್ಟಮೊದಲ ಗದ್ಯ ಕೃತಿ
   (A) ವಡ್ಡಾರಾಧನೆ (B) ಕವಿರಾಜ ಮಾರ್ಗ
   (C) ಪಂಚ ತಂತ್ರ (D) ಚಾವುಂಡರಾಯ ಪುರಾಣ

4. 'ಕವಿಜಿಹ್ವಾಬಂಧನ' ದ ಕರ್ತೃ
   (A) ಕುಮುದೇಂದು (B) ಈಶ್ವರ ಕವಿ
   (C) ಭೀಮ ಕವಿ (D) ವಿರೂಪಾಕ್ಷ ಪಂಡಿತ

5. 'ತ್ರಿ ಷಷ್ಠಿ ಲಕ್ಷಣ ಮಹಾಪುರಾಣ' ದ ಕರ್ತೃ
   (A) ದುರ್ಗಸಿಂಹ (B) ಚಾವುಂಡರಾಯ
   (C) ೨ನೇ ಚಾವುಂಡರಾಯ (D) ನಾಗವರ್ಮ

6. ನಯಸೇನನ ಕಾಲ
   (A) ಕ್ರಿ.ಶ. 1112 (B) ಕ್ರಿ.ಶ. 1030
   (C) ಕ್ರಿ.ಶ. 1200 (D) ಕ್ರಿ.ಶ. 1280

7. ಕುಮಾರ ವಾಲ್ಮೀಕಿಯ ನಿಜನಾಮಧೇಯ
   (A) ನರಹರಿತೀರ್ಥ (B) ನರಹರಿ
   (C) ವಿಮಲ ಸೂರಿ (D) ನರಹರಿ ಶಾಸ್ತ್ರಿ

8. 'ನೀಮಾಯೆಯೊಳಗೊ ನಿನ್ನೊಳು ಮಾಯೆಯೊ' ಎಂದು ಕೇಳಿದವರು
   (A) ಅಲ್ಲಮಪ್ರಭು (B) ಪುರಂದರದಾಸ
   (C) ಕನಕದಾಸ (D) ಜಗನ್ನಾಥದಾಸ

9. 'ಅರಿಕ್ಷಿಣವನೆಂದು ಹೊಂದೊಡಿಗೆಯನೆ ತೊಟ್ಟು' ಎಂಬ ಸಾಲು ಈ ವಚನಕಾರನದು
   (A) ಅಕ್ಕಾಮಹಾದೇವಿ (B) ಬಸವಣ್ಣ
   (C) ಚೆನ್ನ ಬಸವಣ್ಣ (D) ಸಿದ್ಧರಾಮ

10. 'ಯೋಗಾಂಗ ತ್ರಿವಿಧಿ' ಯ ಕರ್ತೃ
    (A) ಅಕ್ಕಾಮಹಾದೇವಿ (B) ಅಕ್ಕನಾಗಮ್ಮ
    (C) ಸತ್ಯಕ್ಕ (D) ಚೆನ್ನ ಬಸವಣ್ಣ

11. 'ಮೋಹನ ತರಂಗಿಣಿ' ಕಾವ್ಯದ ಛಂದಸ್ಸು
    (A) ರಗಳೆ (B) ತ್ರಿಪದಿ
    (C) ಷಟ್ಪದಿ (D) ಸಾಂಗತ್ಯ

12. 'ಮಿತ್ರವಿಂದಾ ಗೋವಿಂದ' ಕೃತಿಯ ಮೂಲ
    (A) ಊರುಭಂಗ (B) ಅಭಿಜ್ಞಾನ ಶಾಕುಂತಲ
    (C) ರತ್ನಾವಳಿ (D) ಮೇಘದೂತ

13. 'ಅನ್ನ' ಕಾದಂಬರಿಯ ಕರ್ತೃ
    (A) ಬಸವರಾಜ ಕಟ್ಟೀಮನಿ (B) ರಂ.ಶ್ರೀ. ಮುಗಳಿ
    (C) ವಿ.ಕೃ. ಗೋಕಾಕ (D) ತ.ರಾ.ಸು.

14. ಬಸವಣ್ಣ ಶಾಸ್ತ್ರೀಯವರು ಅನುವಾದಿಸಿದ ನಾಟಕ
    (A) ಅಭಿಜ್ಞಾನ ಶಾಕುಂತಲ
    (B) ಊರುಭಂಗ
    (C) ಸ್ವಪ್ನ ವಾಸವದತ್ತ
    (D) ಪ್ರತಿಜ್ಞಾ ಯೌಗಂಧರಾಯಣ

15. 'ಕಾಡು' ಕಾದಂಬರಿಯ ಕರ್ತೃ
    (A) ಪೂರ್ಣ ಚಂದ್ರ ತೇಜಸ್ವಿ
    (B) ಶಾಂತಿನಾಥ ದೇಸಾಯಿ
    (C) ಯು. ಆರ್. ಅನಂತಮೂರ್ತಿ
    (D) ಶ್ರೀ ಕೃಷ್ಣ ಆಲನಹಳ್ಳಿ

16. 'ಗುಣಗೌರವ' ವಿಮರ್ಶಾಕೃತಿಯ ಕರ್ತೃ
    (A) ಜಿ. ಎಚ್. ನಾಯಕ
    (B) ಕೀರ್ತಿನಾಥ ಕುರ್ತಕೋಟಿ
    (C) ಗಿರಡ್ಡಿ ಗೋವಿಂದ ರಾಜ
    (D) ಡಿ. ಆರ್. ನಾಗರಾಜ

17. 'ನಾಡೋಜ ಪಂಪ' ಕೃತಿಯ ಕರ್ತೃ
    (A) ಎಲ್. ಬಸವರಾಜು
    (B) ಮುಳಿಯ ತಿಮ್ಮಪ್ಪಯ್ಯ
    (C) ಜಿ. ಎಸ್. ಶಿವರುದ್ರಪ್ಪ
    (D) ಎಂ. ಎಂ. ಕಲಬುರ್ಗಿ

18. 'ಶಬ್ದಾರ್ಥೌ ಸಹಿತೌ ಕಾವ್ಯಂ' ಎಂದು ಹೇಳಿದವರು
(A) ದಂಡಿ (B) ವಾಮನ
(C) ಭಾಮಹ (D) ವಿಶ್ವನಾಥ

19. ಪ್ಲೇಟೋನ ಕೃತಿ ಇದು
(A) ಪೊಯೆಟಿಕ್ಸ್ (B) ರಿಪಬ್ಲಿಕ್
(C) ಈಸ್ಥೆಟಿಕ್ಸ್ (D) ಓರಿಯೆಂಟಲಿಸಂ

20. ಸಬಿಂದುಕ ಶಬ್ದಗಳು ಅಬಿಂದುಕಗಳಾಗಿ ಪ್ರಯೋಗಗೊಂಡ ಕಾಲ ಘಟ್ಟ
(A) ಪೂರ್ವದ ಹಳಗನ್ನಡ (B) ಹಳಗನ್ನಡ
(C) ಹೊಸಗನ್ನಡ (D) ನಡುಗನ್ನಡ

**ಬಹು ಆಯ್ಕೆ ಮಾದರಿಗಳು**

21. ಇವರು ಸಾಂಗತ್ಯ ಕವಿಗಳು
(I) ಕನಕದಾಸ ಮತ್ತು ಲಕ್ಷ್ಮೀಶ
(II) ರತ್ನಾಕರವರ್ಣಿ ಮತ್ತು ಶಿಶುಮಾಯಣ
(III) ನಂಜುಂಡ ಮತ್ತು ಹೆಳವನ ಕಟ್ಟಿಗಿರಿಯಮ್ಮ
(IV) ಕುಮಾರ ವಾಲ್ಮೀಕಿ ಮತ್ತು ಷಡಕ್ಷರ ದೇವ
ಇವುಗಳಲ್ಲಿ ಸರಿಯಾದ ಉತ್ತರ
(A) II ಮತ್ತು III (B) I ಮತ್ತು II
(C) II ಮತ್ತು IV (D) I ಮತ್ತು IV

22. ಇವು ಅರ್ಥ ವಿಸ್ತಾರಕ್ಕೆ ಉದಾಹರಣೆಗಳು
(I) ಎಣ್ಣೆ ಮತ್ತು ಕೂಸು
(II) ಧರ್ಮ ಮತ್ತು ಅಮ್ಮ
(III) ಓಲೆ ಮತ್ತು ಚೊಂಬು
(IV) ಕಬ್ಬಿಣ ಮತ್ತು ಕೂಳು
ಇವುಗಳಲ್ಲಿ ಸರಿಯಾದ ಉತ್ತರ
(A) I ಮತ್ತು II (B) I ಮತ್ತು III
(C) II ಮತ್ತು IV (D) I ಮತ್ತು IV

23. ದ. ರಾ. ಬೇಂದ್ರೆಯವರ ಕೃತಿಗಳು
(I) ನಾದಲೀಲೆ ಮತ್ತು ಕೊಳಲು
(II) ಕೃಷ್ಣಕುಮಾರಿ ಮತ್ತು ಗರಿ
(III) ಸಾಯೋ ಆಟ ಮತ್ತು ನಗೆಯ ಹೊಗೆ
(IV) ಸಖೀಗೀತ ಮತ್ತು ಸಮುದ್ರಗೀತೆಗಳು
ಇವುಗಳಲ್ಲಿ ಸರಿಯಾದ ಉತ್ತರ
(A) II ಮತ್ತು III (B) I ಮತ್ತು II
(C) III ಮತ್ತು IV (D) I ಮತ್ತು IV

24. ಕಾವ್ಯ ಮೀಮಾಂಸೆಯಲ್ಲಿ ಇವು ರೀತಿಯ ಬಗೆಗಳು
(I) ಗೌಡಿ – ಲಾಟೀಯ
(II) ಶೂರಸೇನಿ – ವೈದರ್ಭಿ
(III) ಧ್ವನಿ – ರಸ
(IV) ವೈದರ್ಭಿ – ಪಾಂಚಾಲಿ
ಇವುಗಳಲ್ಲಿ ಸರಿಯಾದ ಉತ್ತರ
(A) I ಮತ್ತು II (B) II ಮತ್ತು III
(C) I ಮತ್ತು IV (D) III ಮತ್ತು IV

25. ಇವು ಕಥಾ ಪ್ರಕಾರಕ್ಕೆ ಸೇರಿದ ಕೃತಿಗಳು
(I) ಎದೆಗೆ ಬಿದ್ದ ಅಕ್ಷರ – ದ್ಯಾವನೂರು
(II) ಗಾಂಧೀ ಬಂದ – ಗಾಂಧೀ ಕ್ಲಾಸ್
(III) ಕಲ್ಲು ಕರಗುವ ಸಮಯ – ಕಥೆಯಾದಳು ಹುಡುಗಿ
(IV) ನಾನು ಕೊಂದ ಹುಡುಗಿ – ಭಗವತಿ
ಇವುಗಳಲ್ಲಿ ಸರಿಯಾದ ಉತ್ತರ
(A) I ಮತ್ತು II (B) II ಮತ್ತು III
(C) I ಮತ್ತು III (D) III ಮತ್ತು IV

26. ಇವು ದೇಸೀ ಪದಗಳು
(I) ಕಬ್ಬಿಣ – ತಿಂಗಳು (II) ಗೌಡ – ಬಸವ
(III) ಹೆಂಗಸು – ಗಾಳಿ (IV) ಕುಪ್ಪಸ – ಜಾತ್ರೆ
ಇವುಗಳಲ್ಲಿ ಸರಿಯಾದ ಉತ್ತರ
(A) I ಮತ್ತು II (B) I ಮತ್ತು III
(C) II ಮತ್ತು III (D) I ಮತ್ತು IV

27. ಇವು ವಿಮರ್ಶಾ ಕೃತಿಗಳು
(I) ಭುವನದ ಭಾಗ್ಯ – ಪ್ರಜ್ಞೆ ಮತ್ತು ಪರಿಸರ
(II) ಯುಗಧರ್ಮ ಹಾಗೂ ಸಾಹಿತ್ಯ ದರ್ಶನ – ದ್ರೌಪದಿಯ ಶ್ರೀಮುಡಿ
(III) ಯುಗ ಸಂಧ್ಯಾ – ಮಾರ್ಗ
(IV) ಸೌಂದರ್ಯ ಮತ್ತು ಕಾಮ ಪ್ರಚೋದನೆ – ಮೂರು ದಾರಿಗಳು
ಇವುಗಳಲ್ಲಿ ಸರಿಯಾದ ಉತ್ತರ
(A) I ಮತ್ತು IV (B) III ಮತ್ತು IV
(C) II ಮತ್ತು III (D) I ಮತ್ತು II

**28.** ಇವು ಸಪ್ತಮೀ ವಿಭಕ್ತಿಯ ಪ್ರತ್ಯಯಗಳು

(I) ಉಳ್ ಮತ್ತು ಒಳ್ (II) ಅ ಮತ್ತು ಎ

(III) ಅನ್ನು ಮತ್ತು ಇಂದ (IV) ಅಲ್ಲಿ ಮತ್ತು ಒಳಗೆ

ಇವುಗಳಲ್ಲಿ ಸರಿಯಾದ ಉತ್ತರ

(A) I ಮತ್ತು IV (B) II ಮತ್ತು III

(C) III ಮತ್ತು IV (D) I ಮತ್ತು II

**29.** ಹಾಲರಾಜನ 'ಗಾಥಾಸಪ್ತಶತಿ' ಯಲ್ಲಿ ಬರುವ ಕನ್ನಡ ಶಬ್ದಗಳು

(I) ಗ್ರಾಮ (II) ಗಿಡ

(III) ಪೊಟ್ಟ (IV) ತುಪ್ಪ

ಇವುಗಳಲ್ಲಿ ಸರಿಯಾದ ಉತ್ತರ

(A) I ಮತ್ತು III (B) III ಮತ್ತು IV

(C) II ಮತ್ತು IV (D) IV ಮತ್ತು I

**30.** ಇದು ಕರ್ಮಧಾರಯ ಸಮಾಸಕ್ಕೆ ಉದಾಹರಣೆ

(I) ಮಾಮರ (II) ಬಿಲ್ಲಾಣ

(III) ಕೆಳೆಗೊಂಡು (IV) ಬೆಳ್ಗೊಡೆ

ಇವುಗಳಲ್ಲಿ ಸರಿಯಾದ ಉತ್ತರ

(A) I ಮತ್ತು II (B) III ಮತ್ತು IV

(C) II ಮತ್ತು III (D) I ಮತ್ತು IV

**ಲೇಖನ ಭಾಗ ಆಧಾರಿತ ಬಹು ಆಯ್ಕೆಯ ಮಾದರಿ :**

ಈ ಕೆಳಗಿನ ಭಾಗವನ್ನು ಓದಿ, ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳದಲ್ಲಿ ಗುರುತಿಸಿರಿ. (**31** ನೇ ಪ್ರಶ್ನೆಯಿಂದ **35** ನೇ ಪ್ರಶ್ನೆಯವರೆಗೆ).

ಈ ಜಂಬೂದ್ವೀಪದ ಭರತಕ್ಷೇತ್ರದೊಳ್ ಅಮಳಕಂಠಮೆಂಬುದು ಪೊಱಲದ ನಾಳ್ವೊಂ ಅವಿಷ್ಟಸೇನನೆಂಬೊನರಸನಾತನ ಮಹಾದೇವಿ ನಂದಿನಿಯೆಂಬೊಳಾಯಿರ್ವರ್ಗೆ ಮಗಂ ದಂಡಕನೆಂಬೊಂ ಪುಟ್ಟಿದೊನಾತಂ ಗರ್ಭದೊಳಿರ್ದಂದು ನಂದಿನಿ ಮಹಾದೇವಿಗಿಂತುಟೊಂದು ಬಯಕೆಯಾದುದೆಲ್ಲಾ ಜನಂಗಳುಮಂ ದಂಡಿಸುವಂತಿರೆಯದಱೆಂದಾತಂಗೆ ತಾಯುಂ ತಂದೆಯುಂ ದಂಡಕನೆಂದು ಪೆಸರನಿಟ್ಟೊರಾತನಿಂ ಕಿಱಿಯೊಳ್ ನಂದವತಿಯೆಂಬೊಳ್ ಕೂಸಾಕೆಯನರ್ಧ ಚಕ್ರವರ್ತಿಯಪ್ಪ ವಿಷ್ಣುವಿಂಗೆ ಕೊಟ್ಟು ದಂಡಕನುಂ ವಿಷ್ಣು ವಿಂಗಾದಮಾನುಂ ಪ್ರಿಯನಪ್ಪ ಸೇನಾಪತಿಯಾದನಂ ತನಿಬರುಮಿಷ್ಟವಿಷಯ ಕಾಮ ಭೋಗಂಗಳನನುಭವಿಸುತ್ತಂ ಪಲಕಾಲಂ ಸಲೆ

ಮತ್ತೊಂದು ದಿವಸಂ ವಿಷ್ಣು ಅರಿಷ್ಟನೇಮಿಭಟಾರರಂ ಬಂದಿಸಲ್ಕೆಂದು ಬಲದೇವಂ ಬೆರಸು ಪುತ್ರಕಳತ್ರ ಮಿತ್ರ ಸಪರಿವಾರಂ ಪೋಗಿ ಇಂತೆಂದು ಬೆಸಗೊಂಡಂ ''ಭಟಾರಾ ಈ ಅತಿ ರೌದ್ರನಪ್ಪ'' ದಂಡಕಂ ನರಕಂಬುಗುವಂತಿರೆ ಪಿರಿದುಂ ಪಾಪಮಂ ನೆರಪಿದನೀತನ ಪಾಪಕರ್ಮದುಪಶಮಮೆನಿತು ಕಾಲದಿಂದಕ್ಕುಂ ಮತ್ತಮೀತನ ಮುನ್ನಿನ ಭವಮೇನೆಂದು ಬೆಸಗೊಂಡೊಡೆ ಸಕಲ ವಿಮಲ ಕೇವಲ ಜ್ಞಾನ ವಿರಾಜಿತನಪ್ಪ ಅರಿಷ್ಟನೇಮಿ ಭಟಾರರಿಂತೆಂದು ಪೇೞ್ದರ್

ಈ ಜಂಬೂದ್ವೀಪದ ಪೂರ್ವವಿದೇಹದೊಳ್ ವೀತಶೋಕಮೆಂಬುದು ಪೊಱಲುಂಟು ಆದನಾಳ್ವೊನ್ ಅಶೋಕನೆಂಬೊನರಸನಾತನ ಮಹಾಸಾಮಂತಂ ಸುಧಾಮಕನೆಂಬೊಂ ತೀವ್ರಲೋಭದೊನತಿ ರೌದ್ರಮಪ್ಪಾರಂಭ ಕರ್ಮದೊಳ್ ಕೂಡಿದೊಂ ತನ್ನಾರಂಭದ ಕೆಯ್ಗಳನೊಕ್ಕು ವೆಟ್ಟುಗಳ ಬಾಯಂ ಕಟ್ಟಿಯೊಕ್ಕಿ ಸುಗುಂ ಮತ್ತಡುವ ಬಡ್ಡಿಸುವ ಬೆಸಕೆಯ್ವ ಪೆಂಡಿರ ಮೊಲೆಗಳಂ ಸೀರೆಯಿಂ ಕಟ್ಟಿಸಿ ಕೂಸುಗಳಂ ಮೊಲೆಯುಣಲೀಯದೆ ಬೆಸಕೆಯ್ಸುಗುಂ ಮತ್ತಂ ಕೊಲೆಯುಂ ಪಿರಿದಾರಂಭಮುಂ ಪೆರ್ವರದುಮೆಂಬಿವು ಕಾರಣಮಾಗಿ ನರಕಾಯುಷ್ಯಂ ಕಟ್ಟಿ ಕಾಲಂ ಸಲೆ ಆತಂಗೆ ಶಿರೋರೋಗಮುಂ ಮುಖರೋಗಮುಮಾಗಿ ವೇದನಾಭಿಭೂತನಾಗಿರ್ಪನ್ನೆಗಂ ವೈದ್ಯರಂ ಬೆಸಗೊಂಡೊಡದರ್ಕೆ ಪ್ರತೀಕಾರವೊಂದು ದಿವಸಂ ತನಗೆ ಮರ್ದುವೆರ ಸಿಯಟ್ಟ ಕೂಟನುಣಲೆಂದಿರ್ಪನ್ನೆಗಂ ಸಮಾಧಿಗುಪ್ತರೆಂಬ ಭಟಾರ್ರ್ ಚರಿಗೆವೊಕ್ಕರವರನತಿ ಭಕ್ತಿಯಿಂದಂ ನಿಱಿಸಿ ತನಗುಳ್ಳ ವ್ಯಾಧಿಯವರ್ಗುಂ ಟೆಂಬುದನಱುದು ತನಗೆಂದು ಮಾಡಿದ ಮರ್ದಿನ ಕೂಟನವರ್ಗೆ ಬಡ್ಡಿಸಿದೊಡವರ್ ಚರಿಗೆ ಮಾಡಿ ಪರಸಿ ಪೋದರ್ ಪನ್ನೆರಡು ವರುಷದ ಶಿರೋರೋಗಮುಂ ಮುಖರೋಗಮುಮಾರಿಸಿಯರ್ಗೆ ಕೆಟ್ಟತ್ತಾ ಸುಧಾಮಕನುಂದಾನದ ಫಲದಿಂದಂ ಕಿಱುದು ಪುಣ್ಯಮಂ ನೆರಪಿಸಿಕೊಂಡಂ ಮತ್ತಂ ಬದ್ಧಾಯುಷ್ಯನಪ್ಪುದಱೆಂ ಮೂಱನೆಯ ನರಕದೊಳೇೞು ಸಾಗರೋಪಮಾಯುಷ್ಯಮನೊಡೆಯೊಂನಾರಕನಾಗಿ ಪುಟ್ಟಿ ಇಂತು ನರಕ ಲೋಕದೊಳ್ ಕಣ್ಣೆವೆಯಿಕ್ಕುವನಿತು

ಪೊಟ್ಟಿಪೊಡಂ ಸುಖಮಿಲ್ಲದೆಪಲಕಾಲಂ ದುಃಖಮನನುಭವಿಸಿ ಬಂದಿಲ್ಲಿ ದಂಡಕನಾದಂ ಮುನ್ನಿನ ಭವದೊಳ್ ಪ್ರಾಣಿಗಳಂ ದಂಡಿಸಿದ ತನ್ನ ಪೂರ್ವದಭ್ಯಾಸವುನೆ ನಂದಿನಿ ಮಹಾದೇವಿಯ ಗರ್ಭದೊಳಿರ್ದು ತೋಱುದನಪ್ಪುದಱಿಂ ದಂಡಕನೆಂಬ ಪೆಸರಾಯ್ತಿಂತಪ್ಪ ಸ್ವಾನು ಭೂತಮಪ್ಪ ನರಕ ಲೋಕದ ಮಹಾದುಃಖಮಂ ಸರ್ವಜ್ಞರ್ ಪೇೞೆನಂಬಿ ನರಕದೆ ಮಹಾದುಃಖಕ್ಕಂಜಿ ದಂಡಕಂ ತಪಂಬಟ್ಟೋದುಗಳೆಲ್ಲಮಂ ಕಲ್ತು ರಿಸಿಯರ್ಕಳೊಡನೆ ಗ್ರಾಮ ನಗರ ಖೇಡ ಖರ್ವಡ ಮಡಂಬ ಪಟ್ಟಣ ದ್ರೋಣಾಮುಖಂಗಳಂ ವಿಹಾರಿಸುತ್ತಂ ಚರಿಗೆವೊಕ್ಕೊಡಾರುಂನಿಱೆಸುವೊರಿಲ್ಲ ಮೂಱೆತ್ತು ನಿಱೆಸಿದೊಡಂ ಛರ್ದಿಯಕ್ಕುಂ ರಿಸಿಯರ್ಕಳೊಡನೆ ಚರಿಗೆವೊಕ್ಕೊಡನಿಬರ್ಗಮಲಾಭಮಕ್ಕುಂ ಮತ್ತಂ ವಾತ ಪಿತ್ತ ಶ್ಲೇಷ್ಮ ಖಾಸ ಶ್ವಾಸ ಜ್ವರಾರುಚಿ ಛರ್ದಿ ಅತಿಸಾರಾಕ್ಷಿ ಕುಕ್ಷಿವೇದನಾಸ್ಫೋಟಕ ಪಿಟಕ ಶೂಲ ಭಗಂದರಂ ಕುಷ್ಠ ಕ್ಷಯ ಗಂಡ ಶೀರೋವೇದನಾದಿ ವ್ಯಾಧಿಗಳಾಗಿ ರೂಪಱೆಯಲಾಗದಂತಿರೆ ವ್ಯಾಧಿಗಳಿಂದಮೊಟ್ಟಯಿಸೆ ಪಟ್ಟನಾಗಿ ಮಗುಟ್ದು ವಿಹಾರಿಸುತ್ತಂ ರಿಸಿಯರ್ಕಳೊಡನೆ ದ್ವಾರಾವತಿಗೆ ಬಂದಿರ್ದೊರ್

ಅನ್ನೆ ಗಮೊಂದು ದಿವಸಂ ವಿಷ್ಣು ಬಂದು ರಿಸಿಯರ್ಕಳಂ ವಂದಿಸಿಯವರೊಳಗೆ ದಂಡಕ ರಿಸಿಯಾರೆಂದೊಡೆ ಕೆಲದ ರಿಸಿಯರ್ ತೋಱೆದೊಡವರಂ ವಂದಿಸಿ ನೋಡಿ ವ್ಯಾಧಿಯ ಪ್ರಬಲತ್ವಮುಂ ಕಂಡು ವೈಯಾಪೃತ್ಯಂ ಗೆಯ್ವುದರ್ಕಾದ ಮಾನುಮುಟ್ಟುಯೊಡೆಯನಾಗಿ ಪೊಡೆವಟ್ಟಿಂತೆಂದು ಭಟಾರಾ ನಿಮ್ಮನೊಂದಂ ಬೇಡಿದಪ್ಪೆಂ ದಂಡಕ ರಿಸಿಯಾ ವರ್ಷಾಕಾಲಮನೆನ್ನ ದೇಹಾರದೊಳಿರ್ದಂತಃ ಪುರದ ಮನೆಗಳೊಳ್ ಚರ್ಯಾಮಾರ್ಗಂಬುಗುವುದನೆನಗೆ ದಯಗೆಯ್ಯಲ್ವೇಟ್ಟುಮೆಂದೊಡವರುಮಂತೆಗೆಯ್ವೆಮೆಂದು ವಿಷ್ಣುವ ದೇಹಾರದೊಳ್ ಜೋಗುಗೊಂಡಿರ್ದೊಡೆ ವಿಷ್ಣು ತನ್ನ ಪ್ರಧಾನನಪ್ಪ ಜಯನೆಂಬ ವೈದ್ಯನಂ ಕರೆದಿಂತೆಂದಂ ನಮ್ಮ ದಂಡಕ ರಿಸಿಯ ಕುತ್ತಮನೆಂತು ಬಲ್ಲೆಯಂತೆ ತೀರ್ಚೆಂದು ಪೇೞ್ದೊಡಾತನು ಮಂತೆಗೆಯ್ವೆನೆಂದು ದಿವ್ಯೌಷಧಿಗಳಿಂದಂ ಮಾಡಿದುಂಡೆಗಳಂ ಪಿಟ್ಟಿನೊಳ್ ಸಾಸಿರ್ವರರಸಿಯರ್ಕಳ ಮನೆಗಳೊಳ್ ಪ್ರಯೋಗಿಸಿಯಾ ರುಷಿಯರಂ ಮರ್ದನೂಡಿದಂ ಮತ್ತಂ ಪೊಟಿಲೊಳಗೆಲ್ಲಂ ಉಂಡೆಯ ಪರ್ವಮಂ ಮಾಡಿಸಿದನಿಂತು ವರ್ಷಾಕಾಲದ ನಾಲ್ಕು ತಿಂಗಳೊಳಂ ಮರ್ದನೂಡಿ ಕುತ್ತಮನಿಂಬುಮಾಡಿದೊಡೆ ವೈಯಾಪೃತ್ಯಂ ಗೆಯ್ವುದಱೊಳಾದಮಾನುಂ ಉದ್ಯೋಗಪರನಪ್ಪುದಱೆಂ ವಿಷ್ಣುವಿಂಗೆ ತೀರ್ಥಕರ ನಾಮಂ ಕಟ್ಟಿತ್ತು ಮತ್ತಂ ದಂಡಕ ರಿಸಿಯರ ಮೆಯ್ಯ ತೊಗಲ್ ಪಾವಿನ ಪೊರೆ ಸುಲಿವಂತೆ ಸುಲಿದು ಪೋಗಿ ನಿರ್ವ್ಯಾಧಿತ ದೇಹರಾಗಿ ಮೆಯ್ಯ ತೇಜಂ ತೊಳಗುತ್ತಿರ್ದುದಂ ವಿಷ್ಣುಕಂಡು ವ್ಯಾಧಿ ಕೆಟ್ಟುದೆಂದಱಿದು ಆದಮಾನುಂ ಹರ್ಷಚಿತ್ತನಾಗಿ ಆ ರುಷಿಯರ ಪಕ್ಕದೆ ವೈದ್ಯ ಜಯನಂ ಪೊಗಟ್ದೊಡವರ್ ಕೆಮ್ಮಗಿರ್ದೊಡೆ ವೈದ್ಯನಿವರೆನ್ನಂ ಪೊಗಟ್ದರಿಲ್ಲೆಂದು ಮನದೊಳಾ ರಿಸಿಯರೊಳಪ್ಪ ಮುಳಿಸಂ ತಳೆದು ಆರ್ತಧ್ಯಾನದಿಂ ಕೆಲಕಾಲದಿಂ ಕಾಲಂ ಗೆಯ್ದು ವಿಂಧ್ಯಾಟವೀ ಮಧ್ಯಸ್ಥಮಪ್ಪ ನರ್ಮದಾ ನದೀ ತೀರದೊಳ್ ಕೋಡಗಮಾಗಿ ಪುಟ್ಟಿದೊಂ

**31.** ನಂದವತಿಯು ಇವರ ಮಗಳು

(A) ಸೇನಾಧಿಪತಿ ವಿಷ್ಣು

(B) ದಂಡಕ

(C) ಅವಿಷ್ಟಸೇನ ಅರಸ

(D) ವಿರಾಜಿತನೆಂಬ ಅರಿಷ್ಟನೇಮಿ

**32.** ಸುಧಾಮಕನಿಗೆ ದೊಡ್ಡರೋಗ ಹತ್ತಲು ಕಾರಣ

(A) ಹುಟ್ಟಿದ ಮಕ್ಕಳಿಗೆ ಹಾಲು ಕುಡಿಯಲು ಬಿಡದೆ ಇರುವುದು

(B) ಅನೇಕ ಕೊಲೆಗಳನ್ನು ಮಾಡಿದ್ದರಿಂದ

(C) ಸಮಾಧಿಗುಪ್ತರೆಂಬ ಯತಿಗಳನ್ನು ಹಿಂಸಿಸಿದ್ದರಿಂದ

(D) ತನ್ನ ಹೆಂಡಂದಿರ ಕೈಗಳನ್ನು ಕತ್ತರಿಸಿದ್ದರಿಂದ

**33.** ಸುಧಾಮಕನು ಮರುಜನ್ಮದಲ್ಲಿ ಈ ಹೆಸರಿನಿಂದ ಹುಟ್ಟಿದನು

(A) ಅಶೋಕ (B) ದಂಡಕ

(C) ನಾರಕ (D) ವಿಷ್ಣು

**34.** ಶಿರೋರೋಗ ಮತ್ತು ಮುಖರೋಗಗಳು

(I) ವಿಷ್ಣು ಮತ್ತು ಸುಧಾಮಕನಿಗೆ ಅಂಟಿಕೊಂಡವು

(II) ಸುಧಾಮಕ ಮತ್ತು ಅಶೋಕನೆಂಬ ಅರಸನಿಗೆ ಅಂಟಿಕೊಂಡವು

(III) ದಂಡಕ ಮತ್ತು ಸಮಾಧಿಗುಪ್ತರಿಗೆ ಅಂಟಿಕೊಂಡವು

(IV) ಸುಧಾಮಕ ಮತ್ತು ಸಮಾಧಿಗುಪ್ತರಿಗೆ ಅಂಟಿಕೊಂಡವು

(A) I ಮತ್ತು II (B) II ಮತ್ತು III

(C) I ಮತ್ತು IV (D) III ಮತ್ತು IV

**35.** ರೋಗ ನಿವಾರಣೆಗೆ ಮಾಡಿದ ಉಪಾಯ ಮತ್ತು ಪರಿಣಾಮಗಳು

(I) ಸಸ್ಯ ಔಷಧಿಗಳನ್ನು ಹಿಂಡಿ ದೇಹದ ಮೇಲೆ ಹಚ್ಚಿದ್ದು

(II) ಔಷಧಿಗಳಿಂದ ಮಾಡಿದ ಉಂಡೆಗಳನ್ನು ಮದ್ದು ಮಾಡಿ ತಿನ್ನಿಸಿದ್ದು

(III) ಹಾವಿನ ಪೊರೆಯಂತೆ ಚರ್ಮಸುಲಿದು ಮೈಹೊಳೆಯುವಂತೆ ಆಗಿದ್ದು

(IV) ವ್ಯಾಧಿಯ ಕರಿಯ ಬಣ್ಣವು ಹೋಗಿ ಮೈಯೆಲ್ಲ ಬಿಳಿ ಬಣ್ಣ ಆಗಿದ್ದು

(A) I ಮತ್ತು III (B) II ಮತ್ತು IV

(C) II ಮತ್ತು III (D) III ಮತ್ತು IV

**ಹೇಳಿಕೆ – ವಿವರಣೆ ಆಧಾರಿತ ಬಹು ಆಯ್ಕೆಯ ಮಾದರಿ**

**36.** **ಹೇಳಿಕೆ** : 'ಮನಸಿಜನ ಮಾಯೆ ವಿಧಿ ವಿಲಸನದ ನೆರಂಬಡೆಯೆ ಕೊಂದು ಕೂಗದೇ ನರರಂ'

**ವಿವರಣೆ** : ಕಾಮನಮಾಯೆ ವಿಧಿಯ ಸಹಾಯ ಪಡೆಯದೆ ಮಾನವನನ್ನು ಕೊಲ್ಲುತ್ತದೆ

(A) ಹೇಳಿಕೆ ಸರಿ ವಿವರಣೆ ತಪ್ಪು

(B) ಹೇಳಿಕೆ ಸರಿ ವಿವರಣೆ ಸರಿ

(C) ಹೇಳಿಕೆ ತಪ್ಪು ವಿವರಣೆ ತಪ್ಪು

(D) ಹೇಳಿಕೆ ತಪ್ಪು ವಿವರಣೆ ಸರಿ

**37.** **ಹೇಳಿಕೆ** : ಅಪಾರೇ ಕಾವ್ಯ ಸಂಸಾರೇ ಕವಿರೇವ ಪ್ರಜಾಪತಿಃ

**ವಿವರಣೆ** : ಅಪಾರವಾದ ಕಾವ್ಯಜಗತ್ತಿಗೆ ಕವಿಯೇ ಸೃಷ್ಟಿಕರ್ತ

(A) ಹೇಳಿಕೆ ತಪ್ಪು ವಿವರಣೆ ತಪ್ಪು

(B) ಹೇಳಿಕೆ ತಪ್ಪು ವಿವರಣೆ ಸರಿ

(C) ಹೇಳಿಕೆ ಸರಿ ವಿವರಣೆ ಸರಿ

(D) ಹೇಳಿಕೆ ಸರಿ ವಿವರಣೆ ತಪ್ಪು

**38.** **ಹೇಳಿಕೆ** : ನೆರಮನೆಯ ದುಃಖಕ್ಕೆ ಅಳುವವರ ಮೆಚ್ಚುವ ನಮ್ಮ ಕೂಡಲಸಂಗಮದೇವ

**ವಿವರಣೆ** : ನೆರಮನೆಯವರ ದುಃಖಕ್ಕೆ ಅಳುವವರನ್ನು ಕೂಡಲ ಸಂಗಮದೇವನು ಮೆಚ್ಚುವುದಿಲ್ಲ

(A) ಹೇಳಿಕೆ ಸರಿ ವಿವರಣೆ ತಪ್ಪು

(B) ಹೇಳಿಕೆ ಸರಿ ವಿವರಣೆ ಸರಿ

(C) ಹೇಳಿಕೆ ತಪ್ಪು ವಿವರಣೆ ತಪ್ಪು

(D) ಹೇಳಿಕೆ ತಪ್ಪು ವಿವರಣೆ ಸರಿ

**39.** **ಹೇಳಿಕೆ** : ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ

**ವಿವರಣೆ** : ಎಣ್ಣೆ ಮತ್ತು ತುಪ್ಪವನ್ನು ಬೆರಸುವುದು ಸರಿಯೇ ?

(A) ಹೇಳಿಕೆ ಸರಿ ವಿವರಣೆ ಸರಿ

(B) ಹೇಳಿಕೆ ತಪ್ಪು ವಿವರಣೆ ಸರಿ

(C) ಹೇಳಿಕೆ ಸರಿ ವಿವರಣೆ ತಪ್ಪು

(D) ಹೇಳಿಕೆ ತಪ್ಪು ವಿವರಣೆ ತಪ್ಪು

**40.** **ಹೇಳಿಕೆ** : ಗಿರಿಯಲಲ್ಲದೆ ಹುಲ್ಲಮೊರಡಿಯಲ್ಲಾಡುವುದೇ ನವಿಲು

**ವಿವರಣೆ** : ಬೆಟ್ಟದಲ್ಲಿ ಅಲ್ಲದೆ ನವಿಲು ಹುಲ್ಲು ಮೊರಡಿಯಲ್ಲಿ ಆಡುವುದೆ ?

(A) ಹೇಳಿಕೆ ತಪ್ಪು ವಿವರಣೆ ತಪ್ಪು

(B) ಹೇಳಿಕೆ ತಪ್ಪು ವಿವರಣೆ ಸರಿ

(C) ಹೇಳಿಕೆ ಸರಿ ವಿವರಣೆ ತಪ್ಪು

(D) ಹೇಳಿಕೆ ಸರಿ ವಿವರಣೆ ಸರಿ

**41.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?

(A) ಬುಕ್ಕರಾಯ – ಶ್ರವಣಬೆಳ್ಗೊಳ ಶಾಸನ

(B) ಜಿನವಲ್ಲಭ – ಬಾದಾಮಿ ಶಾಸನ

(C) ಅತ್ತಿಮಬ್ಬೆ – ತಮಟಕಲ್ಲು ಶಾಸನ

(D) ಗೊಮ್ಮಟಸ್ತುತಿ – ಗಂಗಾಧರಂ ಶಾಸನ

**42.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?

(A) ಚಂದ್ರರಾಜ – ಜಾತಕ ತಿಲಕ

(B) ಕರ್ಣಪಾರ್ಯ – ನೇಮಿನಾಥ ಪುರಾಣ

(C) ಶಾಂತಿನಾಥ – ಚಂದ್ರ ಪ್ರಭ ಚರಿತ

(D) ಶ್ರೀಧರಾಚಾರ್ಯ – ಮದನ ತಿಲಕ

**43.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುವುದಿಲ್ಲ ?

(A) ನಮ್ಮ ಮನೆಯ ದೀಪ – ಪ್ರಬಂಧ

(B) ಮಾಡಿ ಮಡಿದವರು – ಕಾದಂಬರಿ

(C) ಬಾಳ್ವೆಯೇ ಬೆಳಕು – ನಾಟಕ

(D) ಅರಳು ಮರಳು – ಕವನ ಸಂಕಲನ

44. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದಿಕೆಯಾಗುತ್ತದೆ ?

(A) ಇಜ್ಜೋಡು – ಶಿವರಾಮ ಕಾರಂತ

(B) ನಿರೀಂದ್ರಿಯ – ಶಾಂತಿನಾಥ ದೇಸಾಯಿ

(C) ನಟಸಾರ್ವಭೌಮ – ಅ.ನ.ಕೃ.

(D) ಸ್ವಪ್ನದ ಹೊಳೆ – ತ.ರಾ.ಸು.

45. ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದುವುದಿಲ್ಲ ?

(A) ಅನುಪಮಾನಿರಂಜನ – ಮಾಧವಿ

(B) ಗೀತಾ ನಾಗಭೂಷಣ – ಗೆಜ್ಜೆ ಪೂಜೆ

(C) ಸಾರಾ ಅಬೂಬಕ್ಕರ್ – ಚಪ್ಪಲಿಗಳು

(D) ವೀಣಾ ಶಾಂತೇಶ್ವರ – ಮುಳ್ಳುಗಳು

46. ಬಹು ಆಯ್ಕೆಯ ಜೋಡಣೆ

| | |
|---|---|
| a) ಈಸ್ಕಿಲಸ್ | i) ಅಯಾಸ್ |
| b) ಸೊಫೋಕ್ಲಿಸ್ | ii) ಟ್ವೆಲ್ತ್ ನೈಟ್ |
| c) ಶೇಕ್ಸ್‌ಪಿಯರ್ | iii) ದಿ ಪರ್ಷಿಯನ್ಸ್ |
| d) ಬರ್ನಾರ್ಡ್ ಷಾ | iv) ದಿ ಪ್ರಿಟೆಂಡರ್ಸ್ |

ಇವುಗಳಿಗೆ ಸರಿಯಾದ ಉತ್ತರ

| | a | b | c | d |
|---|---|---|---|---|
| (A) | iii | i | ii | iv |
| (B) | ii | iii | iv | i |
| (C) | i | ii | iii | iv |
| (D) | i | iii | ii | iv |

47. ಬಹು ಆಯ್ಕೆಯ ಜೋಡಣೆ

| | |
|---|---|
| a) ರಂಗ ಬಿನ್ನಪ | i) ವಿ.ಸೀ. |
| b) ಅರಲು ಬರಲು | ii) ಕೆ. ಎಸ್. ಎನ್ |
| c) ತೆರೆದ ಬಾಗಿಲು | iii) ಕುವೆಂಪು |
| d) ವೈಶಾಖ | iv) ಎಸ್. ವಿ. ರಂಗಣ್ಣ |
| | v) ಚದುರಂಗ |

ಇವುಗಳಿಗೆ ಸರಿಯಾದ ಉತ್ತರ

| | a | b | c | d |
|---|---|---|---|---|
| (A) | i | ii | iii | iv |
| (B) | iv | iii | ii | i |
| (C) | ii | iv | v | iii |
| (D) | iv | i | ii | v |

48. ಬಹು ಆಯ್ಕೆಯ ಜೋಡಣೆ

| | |
|---|---|
| a) ನಾದಲೀಲೆ | i) ದಲಿತ ಬಂಡಾಯ |
| b) ಜೀವನ ಯಾತ್ರೆ | ii) ನವ್ಯ |
| c) ಕಟ್ಟುವೆವು ನಾವು | iii) ಪ್ರಗತಿಶೀಲ |
| d) ಬದುಕು | iv) ನವೋದಯ |
| | v) ಬಂಡಾಯೋತ್ತರ |

ಸರಿಯಾದ ಉತ್ತರ

| | a | b | c | d |
|---|---|---|---|---|
| (A) | i | ii | iii | iv |
| (B) | iii | ii | i | iv |
| (C) | iv | iii | ii | i |
| (D) | v | iv | iii | ii |

**ಅನುಕ್ರಮ ಮಾದರಿ** : ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.

49. (A) ಜಿನಾಕ್ಷರಮಾಲೆ, ಕರ್ನಾಟಕ ಕಾದಂಬರಿ, ಮದನ ತಿಲಕ, ಕರ್ನಾಟಕ ಭಾಷಾ ಭೂಷಣ

(B) ಕರ್ನಾಟಕ ಕಾದಂಬರಿ, ಕರ್ನಾಟಕ ಭಾಷಾ ಭೂಷಣ, ಜಿನಾಕ್ಷರಮಾಲೆ, ಮದನ ತಿಲಕ

(C) ಕರ್ನಾಟಕ ಭಾಷಾ ಭೂಷಣ, ಕರ್ನಾಟಕ ಕಾದಂಬರಿ, ಮದನ ತಿಲಕ, ಜಿನಾಕ್ಷರಮಾಲೆ

(D) ಜಿನಾಕ್ಷರಮಾಲೆ, ಕರ್ನಾಟಕ ಭಾಷಾ ಭೂಷಣ, ಕರ್ನಾಟಕ ಕಾದಂಬರಿ, ಮದನ ತಿಲಕ

50. (A) ಕುಮಾರವ್ಯಾಸ, ಕುಮಾರ ವಾಲ್ಮೀಕಿ, ಲಕ್ಕಣ್ಣ ದಂಡೇಶ, ಲಕ್ಷ್ಮೀಶ

(B) ಕುಮಾರವ್ಯಾಸ, ಲಕ್ಕಣ್ಣ ದಂಡೇಶ, ಕುಮಾರ ವಾಲ್ಮೀಕಿ, ಲಕ್ಷ್ಮೀಶ

(C) ಲಕ್ಕಣ್ಣ ದಂಡೇಶ, ಕುಮಾರವ್ಯಾಸ, ಲಕ್ಷ್ಮೀಶ, ಕುಮಾರ ವಾಲ್ಮೀಕಿ

(D) ಲಕ್ಷ್ಮೀಶ, ಲಕ್ಕಣ್ಣ ದಂಡೇಶ, ಕುಮಾರ ವಾಲ್ಮೀಕಿ, ಕುಮಾರವ್ಯಾಸ

## Space for Rough Work